Commencement Certificate - Palladium

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೆಚ್ಚುವರಿ ನಿರ್ದೇಶಕರು(ನಗರ ಯೋಜನೆ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು-02.**

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/04/2014-15 ದಿನಾಂಕ: 28-04-2014.

## ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ: ಆಸ್ತಿ ಸಂಖ್ಯೆ 7/14/1, ಹೆಮ್ಮಿಗೆಪುರ, ವಾರ್ಡ್ ಸಂಖ್ಯೆ 198, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD South/ LP 0378/12-13 ದಿ: 03-05-2013.

2) ಅರ್ಜಿದಾರರ ಮನವಿ ದಿನಾಂಕ: 24-03-2014.

3) ಅಪರ ನಿರ್ದೇಶಕರು, ನಗರ ಯೋಜನೆ ರವರ ಆದೇಶ ದಿನಾಂಕ: 26-04-2014.

*****

ಹೆಮ್ಮಿಗೆಪುರ, ವಾರ್ಡ್ ಸಂಖ್ಯೆ 198 ರಲ್ಲಿರುವ ಆಸ್ತಿ ಸಂಖ್ಯೆ 7/14/1 ಇಲ್ಲಿ BBMP/Addl.Dir/JD South/ LP 0378/12-13 ದಿ: 03-05-2013 ರಂದು 2ತಳ+ನೆಲ+ ಮೇಲಿನ 9 ಅಂತಸ್ತುಗಳ ವಸತಿ ಸಮುಚ್ಚಯ 98 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 27-03-2014 ರಂದು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಅಭಿಯಂತರರವರೊಂದಿಗೆ ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 70,000/- ಗಳನ್ನು ಅರ್ಜಿದಾರರು ರಸೀದಿ ಸಂಖ್ಯೆ: TP/JDTPSUT /01/2014-15/Apr/0018 ದಿನಾಂಕ: 28-04-2014 ರಂದು ಭರಿಸಿದ್ದು, ಸಂದಾಯಿಸಿ ಕೊಳ್ಳಲಾಗಿದೆ. ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

28/04/14 28/04

ಗೆ,
ಶ್ರೀ ಮೂರ್ತಯ್ಯ
# 7/14/1, ಹೆಮ್ಮಿಗೆಪುರ,
ವಾರ್ಡ್ ಸಂಖ್ಯೆ 198, ಬೆಂಗಳೂರು.

Recd
28/4/14